AUGUST 28, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಯುವಕರಲ್ಲಿ ತಾಂತ್ರಿಕ ಕೌಶಲ ಹಾಗೂ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಉದ್ದೇಶದಿಂದ, ಕಾರವಾರ ನೌಕಾ ಡಾಕ್‌ಯಾರ್ಡ್ ಹಾಗೂ ಉತ್ತರ ಕನ್ನಡ ಜಿಲ್ಲೆಯ ಸ್ಥಳೀಯ ಕೈಗಾರಿಕಾ ತರಬೇತಿ ಸಂಸ್ಥೆ –ಐ.ಟಿ.ಐಗಳ ನಡುವೆ ಮಹತ್ವದ ತಿಳಿವಳಿಕೆ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಕಾರವಾರದ ನೌಕಾ ಡಾಕ್‌ಯಾರ್ಡ್ ಆವರಣದಲ್ಲಿ ಆಯೋಜಿತ ಕಾರ್ಯಕ್ರಮದಲ್ಲಿ, ಸೋಮನಾಥ ಐಟಿಐ ಬಿಣಗಾ, ಸರ್ಕಾರಿ ಐಟಿಐ ಬಾಡ್, ಮಲ್ಲಿಕಾರ್ಜುನ ಐಟಿಐ ಸಿದ್ದರ ಹಾಗೂ ಸರ್ಕಾರಿ ಐಟಿಐ ಅಂಕೋಲಾ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಯಿತು.

<><><>

ವಿಧಾನಮಂಡಲದ ಮಳೆಗಾಲದ ಅಧಿವೇಶನದಲ್ಲಿ, ಗಂಭೀರ ಚರ್ಚೆಗಳು ನಡೆಯಲಿಲ್ಲ; ಕಲಾಪ ತಮಗೆ ತೃಪ್ತಿ ತಂದಿಲ್ಲ ಎಂದು, ವಿಧಾನಸಭಾಧ್ಯಕ್ಷ ಜಿ.ಎಸ್.ಪಾಟೀಲ, ಹೇಳಿದ್ದಾರೆ. ಹುಬ್ಬಳ್ಳಿಯ, ಶ್ರೀ ಮೂರು ಸಾವಿರ ಮಠಕ್ಕೆ ಭೇಟಿ ನೀಡಿ, ದರ್ಶನ ಪಡೆದು, ಅವರು ಮಾತನಾಡಿದರು. ಬರ ಸೇರಿದಂತೆ, ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ, ಗಂಭೀರ ಚರ್ಚೆಯಾಗಿ, ಪರಿಹಾರ ಕಂಡುಕೊಳ್ಳಬೇಕಿತ್ತು. ಎರಡು ದಿನಗಳ ಮುನ್ನವೇ ಅಧಿವೇಶನ ಮುಂದೂಡಿಕೆಯಾಯಿತು ಎಂದು, ಬೇಸರ ವ್ಯಕ್ತ ಪಡಿಸಿದರು.

<><><>

ಜಿ.ಎಸ್ ಪಾಟೀಲ್ ಧ್ವನಿ– 35 ಸೆಕೆಂದುಗಳು

<><><>

'ವಿಕಸಿತ ಭಾರತ; ಗ್ರಾಮೀಣ ಉದ್ಯೋಗ ಖಾತ್ರಿ ಹಾಗೂ ಜೀವನೋಪಾಯ ಮಿಷನ್ - ವಿ.ಬಿ. ಜಿ ರಾಮ್ ಜಿ' ಯೋಜನೆ ಅಡಿ, 60 ವರ್ಷ ಮೇಲ್ಪಟ್ಟ, ಹಿರಿಯ ಕೂಲಿ ಕಾರ್ಮಿಕರಿಗೆ, ನಿಯಮಾನುಸಾರ, ಶೇಕಡ 50ರಷ್ಟು ಕೆಲಸದ ವಿನಾಯಿತಿ ನೀಡಲಾಗಿದೆ ಎಂದು, ಮಂಡ್ಯ ಜಿಲ್ಲಾ ಪಂಚಾಯಿತಿ ಸಿ.ಇ.ಓ., ಕೆ.ಆರ್. ನಂದಿನಿ ತಿಳಿಸಿದ್ದಾರೆ.

<><><>

ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲೂಕು, ಕಾರ್ಯನಿರ್ವಾಹಕ ಅಧಿಕಾರಿ, ಡಾಕ್ಟರ್ ಕೆ. ಸರ್ವೇಶ, ನಂಬಿಹಳ್ಳಿ ಹಾಗೂ ಚಲ್ಲಿಗಾನಹಳ್ಳಿ ಗ್ರಾಮ ಪಂಚಾಯಿತಿಗಳಲ್ಲಿ, ವಿ.ಬಿ. ಜಿ ರಾಮ್ ಜಿ ಯೋಜನೆಯಡಿ, ಉದ್ಯೋಗ ಚೀಟಿ ವಿತರಣಾ ಮೇಳಕ್ಕೆ, ಚಾಲನೆ ನೀಡಿದರು.

<><><>

ಧಾರವಾಡ ಜಿಲ್ಲೆ, ಕಲಘಟಗಿ ತಾಲೂಕು ಉಗ್ಗಿನಕೇರಿ ಗ್ರಾಮದಲ್ಲಿ, ವಿ.ಬಿ. ಜಿ ರಾಮ್ ಜಿ ಯೋಜನೆ ಅಡಿ, ಹೆಗ್ಗೇರಿ ಕೆರೆ ಪುನಃಶ್ಚೇತನ ಕಾಮಗಾರಿಯನ್ನು, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಭುವನೇಶ ಪಾಟೀಲ, ಪರಿಶೀಲಿಸಿದರು.

<><><>

ರಕ್ಷಾ ಬಂಧನದ ಹಿನ್ನೆಲೆ, ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ನಾಡಿನ ಜನತೆಗೆ ಶುಭಾಶಯಗಳನ್ನು ಕೋರಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್ ಮಾಧ್ಯಮದಲ್ಲಿ, ಪವಿತ್ರ ರಕ್ಷಾಬಂಧನವು ಕೇವಲ ಸಹೋದರ–ಸಹೋದರಿಯರ ಹಬ್ಬವಾಗಿರದೆ, ಇಡೀ ಸಮಾಜದಲ್ಲಿ ಹೆಣ್ಣಿನ ಘನತೆ, ಗೌರವ ಹಾಗೂ ಸುರಕ್ಷತೆಯನ್ನು ಎತ್ತಿಹಿಡಿಯುವ ದೃಢ ಸಂಕಲ್ಪವಾಗಲಿ ಎಂದು ಆಶಿಸಿದ್ದಾರೆ.

<><><>

ಬೆಳಗಾವಿಯ ಮರಾಠಾ ಲೈಟ್ ಇನ್‌ಫೆಂಟ್ರಿ ರೆಜಿಮೆಂಟಲ್ ಸೆಂಟರ್, ಮರಾಠಾ ಲಘು ಪದಾತಿ ದಳದ ಕೇಂದ್ರದಲ್ಲಿ ರಕ್ಷಾ ಬಂಧನ ಸಂಭ್ರಮ ಸಡಗರದೊಂದಿಗೆ ಆಚರಿಸಲಾಯಿತು. ಸಶಸ್ತ್ರ ಪಡೆಯ ಯೋಧರ ಕುಟುಂಬ ಸದಸ್ಯರು ಪಾಲ್ಗೊಂಡಿದ್ದರು. ಬೆಳಗಾವಿ ನಗರದ ಒಟ್ಟು 10 ಕ್ಕೂ ಹೆಚ್ಚು ಶಾಲೆ ಹಾಗೂ ಶಿಕ್ಷಣ ಸಂಸ್ಥೆಗಳ 238 ವಿದ್ಯಾರ್ಥಿನಿಯರು, ಮಹಿಳಾ ಶಿಕ್ಷಕರು ಉಪಸ್ಥಿತರಿದ್ದು, ಸೈನಿಕರಿಗೆ ರಾಖಿ ಕಟ್ಟಿ, ಶುಭಾಶಯ ತಿಳಿಸಿದರು.

<><><>

ಸಮಾಜ ಸುಧಾರಕ, ಸಮಾನತೆಯ ಹರಿಕಾರ ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತಿ ಹಿನ್ನೆಲೆ ನಾಡಿನ ವಿವಿಧೆಡೆ ಕಾರ್ಯಕ್ರಮಗಳು ಆಯೋಜಿತವಾಗಿವೆ. ಶಿಕ್ಷಣ ಹಾಗೂ ಸಂಘಟನೆ ಮೂಲಕ ಸಮಾಜದಲ್ಲಿ ಸಮಾನತೆಯ ಕ್ರಾಂತಿ ಮೂಡಿಸಿದ ಯುಗ ಪುರುಷ ನಾರಾಯಣ ಗುರುಗಳು ಎಂದು ಬಣ್ಣಿಸಿರುವ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಭಕ್ತಿಪೂರ್ವಕ, ಪ್ರಣಾಮಗಳನ್ನು ಸಲ್ಲಿಸಿದ್ದಾರೆ.

<><><>

ಬಳ್ಳಾರಿ ನಗರದ ಜಿಲ್ಲಾ ಹಾಕಿ ಕ್ರೀಡಾಂಗಣದಲ್ಲಿ ಆಯೋಜಿತ, ರಾಜ್ಯ ಮಟ್ಟದ 16 ವ ´೯ದೊಳಗಿನ, ಪುರು ´ರ ಸಬ್ ಜೂನಿಯರ್ ಹಾಕಿ ಪಂದ್ಯಾವಳಿಯಲ್ಲಿ ಧಾರವಾಡ ತಂಡ ಚಾಂಪಿಯನ್ನಾಗಿದೆ. ಇಂದು ಬೆಳಿಗ್ಗೆ ನಡೆದ ಫೈನಲ್ ಪಂದ್ಯದಲ್ಲಿ ಧಾರವಾಡ ತಂಡ, ಹಾವೇರಿ ತಂಡವನ್ನು 4–2 ಗೋಲುಗಳ ಅಂತರದಿಂದ ಮಣಿಸಿತು. ಕರ್ನಾಟಕ ಹಾಕಿ ಅಸೋಸಿಯೇ ´ನ್ ಸಹಕಾರದೊಂದಿಗೆ, ಬಳ್ಳಾರಿ ಜಿಲ್ಲಾ ಹಾಕಿ ಅಸೋಸಿಯೇ ´ನ್ ಆಯೋಜಿಸಿದ್ದ, ಐದು ದಿನಗಳ ಪಂದ್ಯಾವಳಿಯಲ್ಲಿ, ಒಟ್ಟು 12 ತಂಡಗಳು ಪಾಲ್ಗೊಂಡಿದ್ದವು.

<><><>

ದಕ್ಷಿಣಕನ್ನಡ ಜಿಲ್ಲೆಯಲ್ಲಿ, 190 ಎಕರೆ ಭೂಮಿಯನ್ನು, ನಿವೇಶನ ರಹಿತರಿಗೆ ಆದ್ಯತೆಯ ಮೇಲೆ ಹಂಚಲು, ಕಂದಾಯ ಖಾತೆ ಸಚಿವರ ಜೊತೆ ಚರ್ಚಿಸಿದ್ದಾಗಿ, ಜಿಲ್ಲಾಧಿಕಾರಿ ಎಚ್.ವಿ. ದರ್ಶನ್ ತಿಳಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಪರಿಶಿ ್ಟ ಸಮುದಾಯಗಳ ಕುಂದುಕೊರತೆ ಆಲಿಕೆ ಸಭೆ ನಡೆಸಿ, ಮಾತನಾಡಿದರು. ಒಟ್ಟು 2 ಸಾವಿರದ ಇನ್ನೂರಾ 22 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ತಿಳಿಸಿದ್ದಾರೆ.

<><><>

ವಿದ್ಯಾರ್ಥಿಗಳ ಸಮಸ್ಯೆಗಳಿಗೆ, ಕಾಲಮಿತಿಯಲ್ಲಿ ಪರಿಹಾರ ಹಾಗೂ ಶಿಕ್ಷಣ ವ್ಯವಸ್ಥೆಯಲ್ಲಿ ಅಗತ್ಯ ಸುಧಾರಣೆ ನಿಟ್ಟಿನಲ್ಲಿ, ಆರೋಗ್ಯ ಖಾತೆ ಸಚಿವ ಯು.ಟಿ. ಖಾದರ್ ನೇತೃತ್ವದಲ್ಲಿ, ಸಂಪುಟ ಉಪಸಮಿತಿ ರಚನೆಯಾಗಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>